# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು–572 103

ಸಂಖ್ಯೆ: ತುವಿ: ಡಿಇವಿ–02:2026–27/1742 ದಿನಾಂಕ:13.08.2026

## ಸುತ್ತೋಲೆ

ವಿಷಯ: "ಯುವ ಭಾರತ"–ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆಯೋಜಿಸಿರುವ ರೀಲ್ಸ್ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಕುರಿತು.

ಉಲ್ಲೇಖ:1. ಸಿ. ಜಿ. ಶಶಿಧರ್, ಅಧ್ಯಕ್ಷರು, ಜನಸ್ಪಂದನ ಟ್ರಸ್ಟ್, ತಿಪಟೂರು ಇವರ ಪತ್ರ ದಿನಾಂಕ:10.08.2026

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:10.08.2026

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜನಸ್ಪಂದನ ಟ್ರಸ್ಟ್, ತಿಪಟೂರು ಇವರು ತುಮಕೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಸ್ವಾತಂತ್ರ್ಯ ದಿನಾಚರಣೆಯನ್ನು ಕೇವಲ ಒಂದು ಆಚರಣೆಗೆ ಸೀಮಿತಗೊಳಿಸದೆ, ದೇಶಭಕ್ತಿ, ಸಂವಿಧಾನ, ಸಾಮಾಜಿಕ ಜವಾಬ್ದಾರಿ, ಯುವಜನರ ಪಾತ್ರ ಹಾಗೂ ಭಾರತದ ಭವಿಷ್ಯವ ಕುರಿತು ಯುವಜನರು ತಮ್ಮ ಆಲೋಚನೆ, ಅಭಿಪ್ರಾಯ ಮತ್ತು ಸೃಜನಶೀಲತೆಯನ್ನು ವ್ಯಕ್ತಪಡಿಸಲು ವೇದಿಕೆ ಕಲ್ಪಿಸುವ ಉದ್ದೇಶದೊಂದಿಗೆ, "ಯುವ ಭಾರತ"–ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ 18 ರಿಂದ 30 ವರ್ಷದೊಳಗಿನ ಯುವಜವರಿಗಾಗಿ "ಯುವ ಭಾರತ–ರೀಲ್ಸ್" ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, ಎಲ್ಲಾ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತೆ ತಿಳಿಸಿರುತ್ತಾರೆ.

ಈ ಸಂಬಂಧ ಉಲ್ಲೇಖ(01)ರ ಪತ್ರದ ಕೈಪಿಡಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, ಮೇಲ್ಕಂಡ "ಯುವ ಭಾರತ"–ಸ್ವಾತಂತ್ರ್ಯ ದಿನಾಚರಣೆ ರೀಲ್ಸ್ ಸ್ಪರ್ಧೆಯಲ್ಲಿ ಆಸಕ್ತ ವಿದ್ಯಾರ್ಥಿಗಳು ಭಾಗವಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ,

13.08.2026

ಉಪಕುಲಸಚಿವರು

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಅಧ್ಯಕ್ಷರು/ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಅಧ್ಯಕ್ಷರು/ಸಂಯೋಜಕರು ಸ್ನಾತಕೋತ್ತರ ವಿಜ್ಞಾನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, "ಜ್ಞಾನಸಿರಿ ಕ್ಯಾಂಪಸ್" ಬಿದರಕಟ್ಟೆ, ಹೆಬ್ಬೂರು ಹೋಬಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಂಯೋಜಕರು, "ಜ್ಞಾನಸಿರಿ ಕ್ಯಾಂಪಸ್" ಬಿದರಕಟ್ಟೆ, ಹೆಬ್ಬೂರು ಹೋಬಳಿ, ತುಮಕೂರು.
4. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ/ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–ಈ ಸುತ್ತೋಲೆಯನ್ನು ಸಂಬಂಧಿಸಿದವರಿಗೆ ಇ–ಮೇಲ್ ಮುಖಾಂತರ ಕಳುಹಿಸಲು ಅಗತ್ಯಕ್ರಮವಹಿಸುವುದು.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.

ತುಮಕೂರು ವಿಶ್ವವಿದ್ಯಾನಿಲಯ

ಜನಸ್ಪಂದನ ಟ್ರಸ್ಟ್




# ಸ್ವಾತಂತ್ರ್ಯ ದಿನಾಚರಣೆ

## ಯುವ ಭಾರತ

# ಜಿಲ್ಲಾ ಮಟ್ಟದ ರೀಲ್ಸ ಸ್ಪರ್ಧೆ

ಆಗಸ್ಟ್ 12 ರಿಂದ ಸೆಪ್ಟೆಂಬರ್ 4, 2026

## ಬಹುಮಾನಗಳು

**ಪ್ರಥಮ – ₹25,000**

**ದ್ವಿತೀಯ – ₹15,000**

**ತೃತೀಯ – ₹10,000**

ಸಾಮಾಜಿಕ ಕಳಕಳಿ ರೀಲ್ಸ್ ₹5,000 - 10 ಬಹುಮಾನಗಳು

ಸೃಜನಶೀಲ ರೀಲ್ಸ್ ₹2,500 -20 ಬಹುಮಾನಗಳು

ಸಮಾಧಾನಕರ ಬಹುಮಾನ ₹1,000 - 20 ಬಹುಮಾನಗಳು

**ನಗದು ಬಹುಮಾನ 1,70,000**

ರೀಲ್ಸ್ ವಿಷಯಗಳು ಮತ್ತು ನಿಯಮಗಳನ್ನು ತಿಳಿಯಲು ಸ್ಕ್ಯಾನ್ ಮಾಡಿ

ರೀಲ್ಸ್ ಗಳನ್ನು

**7899810812**

ಈ ವಾಟ್ಸಪ್ ನಂಬರ್ ಗೆ ಕಳುಹಿಸಿ

tuda shashidhar tiptur tudashashidhar.com

ರೀಲ್ಸ್ ವಿಷಯಗಳು

1) ದೇಶಭಕ್ತಿ ಮತ್ತು ಪ್ರಜಾಪ್ರಭುತ್ವ
2) ನನಗೆ ಸ್ವಾತಂತ್ರ್ಯ ಎಂದರೆ... - "ನನ್ನ ಸ್ವಾತಂತ್ರ್ಯ, ನನ್ನ ಜವಾಬ್ದಾರಿ"
3) ಯುವಜನರ ಜವಾಬ್ದಾರಿ - "ದೇಶ ಬದಲಿಸುವ ಶಕ್ತಿ ಯಾರಲ್ಲಿದೆ? ಯುವಜನಲ್ಲಿದೆ!"
4) ಸಂವಿಧಾನ ಮತ್ತು ಪ್ರಜಾಪ್ರಭುತ್ವ - "ನನ್ನ ಹಕ್ಕು, ನನ್ನ ಕರ್ತವ್ಯ – ನನ್ನ ಸಂವಿಧಾನ"
5) ಪರಿಸರ ಸಂರಕ್ಷಣೆ - "ಗಿಡ ನೆಡುವುದೇ ಇಂದಿನ ದೇಶಭಕ್ತಿ!"
6) ಭ್ರಷ್ಟಾಚಾರ ಮುಕ್ತ ಭಾರತ - "ನಾನು ಲಂಚ ಕೊಡುವುದಿಲ್ಲ, ಪಡೆಯುವುದಿಲ್ಲ"
7) ಮಹಿಳಾ ಸುರಕ್ಷತೆ ಮತ್ತು ಸಮಾನತೆ - "ಅವಳಿಗೆ ರಕ್ಷಣೆ ಬೇಡ, ಸಮಾನ ಗೌರವ ಬೇಕು"
8) ನಮ್ಮ ಊರಿನ ಸ್ವಾತಂತ್ರ್ಯ ಹೋರಾಟಗಾರರು - "ನಮ್ಮೂರಿನ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರರು"
9) ನಮ್ಮ ಊರಿನ ಸ್ವಾತಂತ್ರ್ಯ ದಿನಾಚರಣೆ
10) ಕ್ಯಾಂಪಸ್ ಲೈಫ್ / ಕಾಲೇಜು ಲೈಫ್ - "ನಮ್ಮ ಕಾಲೇಜು... ನಮ್ಮ ಕಥೆ"
11) ಸೇ ನೋ ಟು ಡ್ರಗ್ಸ್ - "ಡ್ರಗ್ಸ್‌ಗೆ ನೋ... ಬದುಕಿಗೆ ಯೆಸ್!"
13) ಮೊಬೈಲ್ vs ಪುಸ್ತಕಗಳು - "ಸ್ಕ್ರೀನ್‌ನಲ್ಲಿ ಜೀವನವೇ? ಪುಸ್ತಕದಲ್ಲಿ ಭವಿಷ್ಯವೇ?"
14) ಲಿಟರೇಚರ್ ರ್‍ಯಾಂಪ್ - "ಪುಸ್ತಕದಿಂದ ರ್‍ಯಾಂಪ್‌ಗೆ – ಕನ್ನಡ ಸಾಹಿತ್ಯದ ಹೊಸ ಹೆಜ್ಜೆ"
15) ಟೀಚಿಂಗ್ ಸ್ಕಿಲ್ - ಒಳ್ಳೆಯ ಶಿಕ್ಷಕರು ಹೇಗಿರಬೇಕು?"
16) ನನ್ನ ಭಾರತ, ನನ್ನ ಕನಸು - "2047ರ ಭಾರತ – ನನ್ನ ಕನಸಿನ ಭಾರತ"
17) ನನ್ನ ಊರು / ನಗರದ ಭವಿಷ್ಯ - "ನಮ್ಮ ಊರು 2047ರಲ್ಲಿ ಹೇಗಿರಬೇಕು?"
18) ನಗರದಿಂದ ಗ್ರಾಮದೆಡೆಗೆ - "ನಗರದ ವೇಗದಿಂದ ಹಳ್ಳಿಯ ನೆಮ್ಮದಿಯೆಡೆಗೆ"
19) ಕನ್ನಡ ಸಂಸ್ಕೃತಿ - "ನನ್ನ ಭಾಷೆ, ನನ್ನ ಸಂಸ್ಕೃತಿ
20) ಗ್ರಂಥಾಲಯ ಬಳಕೆ - "ಒಂದು ಪುಸ್ತಕ...ಬದಲಾಯಿಸಬಹುದು ಒಂದು ಬದುಕು"
21) ಒಂದು ಬ್ಯಾಡ್ ಹ್ಯಾಬಿಟ್, ಒಂದು ಗುಡ್ ಹ್ಯಾಬಿಟ್ - "ಒಂದು ಅಭ್ಯಾಸ ಬದಲಿಸಿ, ಬದುಕನ್ನೇ ಬದಲಿಸಿ"
22 ) ಮೈ ವಿಲೇಜ್ - ಹಳ್ಳಿಯ ಸಮಗ್ರ ಚಿತ್ರಣ
23) ಜಾನಪದ "ಮರೆಯಾಗುತ್ತಿರುವ ಹಳ್ಳಿ ಸೊಗಡನ್ನು ಉಳಿಸೋಣ"
24) ಸ್ನೇಹ - "ಸ್ನೇಹ ಎಂದರೆ ಫೋನ್ ಕಾಂಟ್ಯಾಕ್ಟ್ ಅಲ್ಲ... ಕಷ್ಟದಲ್ಲಿ ಜೊತೆಯಾಗುವವರು"
25) ಪೋಷಕರು - "ನಮ್ಮ ಯಶಸ್ಸಿನ ಹಿಂದೆ ನಿಂತಿರುವ ಕಾಣದ ಹೀರೋಗಳು"
26) ಇ-ತ್ಯಾಜ್ಯ ನಿರ್ವಹಣೆ - "ನಿಮ್ಮ ಹಳೆಯ ಮೊಬೈಲ್ ಎಲ್ಲಿಗೆ ಹೋಗುತ್ತದೆ?"

ನಿಯಮಗಳು ಮತ್ತು ಷರತ್ತುಗಳು

- ರೀಲ್ಸ್‌ನ ಗರಿಷ್ಠ ಅವಧಿ 1 ನಿಮಿಷ 48 ಸೆಕೆಂಡುಗಳು.
- ರೀಲ್ಸ್ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್ 4, 2026.
- ಕನ್ನಡ ಭಾಷೆಯಲ್ಲಿ ರೀಲ್ಸ್ ಇರಬೇಕು.
- 18ರಿಂದ 30 ವರ್ಷದೊಳಗಿನ, ತುಮಕೂರು ಜಿಲ್ಲೆಯ ಯುವಜನರು ಅಥವಾ ತುಮಕೂರು ಜಿಲ್ಲೆಯ ಕಾಲೇಜುಗಳಲ್ಲಿ ಓದುತ್ತಿರುವವರು ಭಾಗವಹಿಸಬಹುದು.
- ವೈಯಕ್ತಿಕವಾಗಿ ಅಥವಾ ತಂಡವಾಗಿ ಭಾಗವಹಿಸಬಹುದು. ತುಮಕೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೂ ಅವಕಾಶವಿದೆ.
- ಮೊಬೈಲ್ ಸೇರಿದಂತೆ ಯಾವುದೇ ಸೂಕ್ತ ಸಾಧನ ಬಳಸಬಹುದು. ಅಗತ್ಯವಿದ್ದಲ್ಲಿ AI, ಗ್ರಾಫಿಕ್ಸ್ ಮತ್ತು ಎಡಿಟಿಂಗ್ ತಂತ್ರಜ್ಞಾನ ಬಳಸಬಹುದು; ಆದರೆ ಮೂಲ ಪರಿಕಲ್ಪನೆ ಮತ್ತು ಸೃಜನಶೀಲತೆ ಸ್ಪರ್ಧಿಯದ್ದೇ ಆಗಿರಬೇಕು.
- ನಕಲು ಮಾಡಿದ ಅಥವಾ ಇತರರ ವಿಷಯವನ್ನು ಬಳಸಿದ ರೀಲ್ಸ್‌ಗಳನ್ನು ಪರಿಗಣಿಸಲಾಗುವುದಿಲ್ಲ.
- ರೀಲ್ಸ್‌ಗಳು ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಗೌರವಿಸುವಂತಿರಬೇಕು.
- ರಾಜಕೀಯ/ಧಾರ್ಮಿಕ ಪ್ರಚಾರ, ಹಿಂಸೆ, ದ್ವೇಷ, ಜಾತಿ-ಧರ್ಮ ಆಧಾರಿತ ಅವಹೇಳನ, ಕಿರುಕುಳ, ಅಶ್ಲೀಲತೆ ಅಥವಾ ಅಸಭ್ಯತೆ ಇರಬಾರದು.
- ಬಳಸುವ ಸಂಗೀತ, ದೃಶ್ಯಗಳು ಹಾಗೂ ಇತರೆ ವಿಷಯಗಳು ಹಕ್ಕುಸ್ವಾಮ್ಯ ನಿಯಮಗಳಿಗೆ ಅನುಗುಣವಾಗಿರಬೇಕು.
- Instagram ಹಾಗೂ ಜನಸ್ಪಂದನದ ವಿಷಯ ನೀತಿಗಳನ್ನು ಪಾಲಿಸಬೇಕು.
- ಸ್ಪರ್ಧೆಗೆ ಸಲ್ಲಿಸಿದ ರೀಲ್ಸ್‌ಗಳನ್ನು ಸೂಕ್ತ ಕ್ರೆಡಿಟ್‌ನೊಂದಿಗೆ ಜನಸ್ಪಂದನ ಟ್ರಸ್ಟ್ ತನ್ನ ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಬಳಸಲು/ಪ್ರಚಾರ ಮಾಡಲು ಹಕ್ಕು ಹೊಂದಿರುತ್ತದೆ.
- ನಿಯಮ ಉಲ್ಲಂಘಿಸುವ ರೀಲ್ಸ್‌ಗಳನ್ನು ಪೂರ್ವ ಸೂಚನೆ ಇಲ್ಲದೆ ತಿರಸ್ಕರಿಸುವ ಅಥವಾ ತೆಗೆದುಹಾಕುವ ಹಕ್ಕು ಆಯೋಜಕರಿಗೆ ಇದೆ.

ರೀಲ್ಸ್‌ನಲ್ಲಿ ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರೀಯ ಚಿಹ್ನೆ ಹಾಗೂ ರಾಷ್ಟ್ರಗೌರವಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗದಂತೆ ಸ್ಪರ್ಧಿಗಳು ಎಚ್ಚರಿಕೆ ವಹಿಸಬೇಕು.

ಯಾವುದೇ ರೀತಿಯ ಅವಹೇಳನಕಾರಿ, ದ್ವೇಷಪೂರಿತ, ಅಶ್ಲೀಲ ಅಥವಾ ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ಉಂಟುಮಾಡುವ ವಿಷಯಗಳನ್ನು ಒಳಗೊಂಡ ರೀಲ್ಸ್‌ಗಳನ್ನು ಸ್ಪರ್ಧೆಯಿಂದ ಅನರ್ಹಗೊಳಿಸುವ ಹಕ್ಕು ಆಯೋಜಕರಿಗೆ ಇರುತ್ತದೆ.

- ತೀರ್ಪುಗಾರರ ನಿರ್ಧಾರವೇ ಅಂತಿಮ.